ರಾಜ್ಯದ ಗಿರಿ ಪ್ರದೇಶಗಳಲ್ಲಿ ಸೇವೆ ಸಲ್ಲಿಸುವ ನೌಕರರಿಗೆ ವಿಶೇಷ ಭತ್ಯೆ:

14 (275) ಶ್ರೀ ಎಂ.ಪಿ. ಅಪ್ಪಚ್ಚು ರಂಜನ್ (ಸೋಮವಾರಪೇಟೆ): ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

1) ಕೊಡಗು ಜಿಲ್ಲೆಯಾದ್ಯಂತ ಬೆಟ್ಟ ಗುಡ್ಡಗಾಡು ಪ್ರದೇಶಗಳಿಂದ ಆವೃತವಾಗಿರುವುದು ನಿಜವಲ್ಲವೇ;

2) ನಿಜವಿದ್ದಲ್ಲಿ ಮಡಿಕೇರಿ ವ್ಯಾಪ್ತಿಯಲ್ಲಿ ಮಾತ್ರ ಸರ್ಕಾರಿ ನೌಕರರಿಗೆ ಗಿರಿಭತ್ಯೆಯನ್ನು ನೀಡುತ್ತಿದ್ದು ವಿರಾಜಪೇಟೆ ಮತ್ತು ಸೋಮವಾರಪೇಟೆ ತಾಲ್ಲೂಕು ವ್ಯಾಪ್ತಿಗಳಲ್ಲಿ ಸೇವೆ ಸಲ್ಲಿಸುತ್ತಿರುವ ನೌಕರರಿಗೆ ಸದರಿ ಭತ್ಯೆಯನ್ನು ನೀಡದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

3) ಬಂದಿದ್ದಲ್ಲಿ ಇವರುಗಳಿಗೆ ಗಿರಿಭತ್ಯೆಯನ್ನು ಕೊಡದಿರಲು ಕಾರಣಗಳೇನು;

4) ಮೇಲ್ಕಂಡ ಎರಡೂ ತಾಲ್ಲೂಕುಗಳಿಗೆ ಈ ಯೋಜನೆಯ ವ್ಯಾಪ್ತಿಯನ್ನು ವಿಸ್ತರಿಸಲು ಸರ್ಕಾರ ಯೋಜಿಸಿದೆಯೇ?

ಶ್ರೀ ಎಸ್.ಎಂ. ಕೃಷ್ಣ (ಮುಖ್ಯ ಮಂತ್ರಿಗಳು)

1) ಹೌದು.

2) ಪ್ರಸ್ತುತ ಜಾರಿಯಲ್ಲಿರುವ ಗಿರಿಭತ್ಯೆ ದರ ಮತ್ತು ಸ್ಥಳಗಳು ವೇತನ ಆಯೋಗ ಮತ್ತು ಅಧಿಕಾರಿ ವೇತನ ಸಮಿತಿಗಳ ಶಿಫಾರಸ್ಸುಗಳ ಅನ್ವಯವಾಗಿದ್ದು ಅದರಂತೆ ಕೊಡಗು ಜಿಲ್ಲೆಯ ಮಡಿಕೇರಿಯಲ್ಲಿ ಕೆಲಸ ನಿರ್ವಹಿಸುತ್ತಿರುವ ಸರ್ಕಾರಿ ನೌಕರರಿಗೆ ಗಿರಿಭತ್ಯೆ ನೀಡಲಾಗುತ್ತಿದೆ. ಈ ಸೌಲಭ್ಯವನ್ನು ವೇತನ ಆಯೋಗ ಮತ್ತು ವೇತನ ಸಮಿತಿಗಳ ಶಿಫಾರಸ್ಸಿನನ್ವಯ ನೀಡಲಾಗುತ್ತಿದ್ದು ಅದರಲ್ಲಿ ಯಾವುದೇ ಬದಲಾವಣೆಯನ್ನು ಪ್ರಸ್ತಾಪಿಸಲಾಗಿಲ್ಲ.

3) -ಅದೇ-

4) -ಅದೇ-

ವಿದ್ಯುತ್ ಇಲಾಖಾವತಿಯಿಂದ ವಸೂಲಾದ ಹಣ:

17 (54) ಶ್ರೀ ಅಂಜನಮೂರ್ತಿ (ನೆಲಮಂಗಲ): ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

1) 2000-2001ನೇ ಸಾಲಿನಲ್ಲಿ ವಿದ್ಯುತ್ ಇಲಾಖೆಯವರು ರೈತರಿಂದ, ಕೈಗಾರಿಕೋದ್ಯಮಿಯವರಿಂದ, ಇನ್ನಿತರರಿಂದ ವಸೂಲು ಮಾಡಿದ ಹಣದ ಮೊತ್ತವೆಷ್ಟು;

2) ಬಾಕಿ ಎಷ್ಟು ಮೊತ್ತ ವಸೂಲಾಗಬೇಕಾಗಿದೆ; ವಸೂಲಾತಿಗಾಗಿ ಸರ್ಕಾರ ಕೈಗೊಂಡ ಕ್ರಮವೇನು?

ಶ್ರೀ ವೀರಕುಮಾರ್ ಆ. ಪಾಟೀಲ್ (ಇಂಧನ ರಾಜ್ಯ ಸಚಿವರು)

1) ಪ್ರಸಕ್ತ ಸಾಲಿನಲ್ಲಿ (2000-2001) 1-4-2000ದಿಂದ 30-11-2000 ರವರೆಗೆ ನಿಗಮವು ಐ.ಪಿ.ಸೆಟ್ಟು ಬಳಕೆದಾರರಿಂದ, ಕೈಗಾರಿಕೊದ್ಯಮಿಯವರಿಂದ ಹಾಗೂ ಇತರ ವರ್ಗದ ಬಳಕೆದಾರರಿಂದ ವಸೂಲಿ ಮಾಡಿದ ಹಣದ ಮೊತ್ತವು 2635.99 ಕೋಟಿ ರೂ.ಗಳು ವಿವರಗಳು ಈ ಕೆಳಕಂಡಂತಿವೆ.

ಕ್ರ. ಸಂ.	ಬಳಕೆದಾರರ ವಿವರ	ವಸೂಲಿ ಮಾಡಿದ ಹಣ (ಕೋಟಿ ರೂ.ಗಳಲ್ಲಿ)
1.	ಐ.ಪಿ. ಸೆಟ್ಟು ಬಳಕೆದಾರರಿಂದ	95.38
2.	ಕೈಗಾರಿಕೋದ್ಯಮಿಯವರಿಂದ	984.52
3.	ಇತರೆ ವರ್ಗಗಳ ಬಳಕೆದಾರರಿಂದ	1556.09
		2635.99

2) ಬಾಕಿ ವಸೂಲಾಗಬೇಕಾಗಿರುವ ಹಣದ ಮೊತ್ತವು 1,819.47 ಕೋಟಿ ರೂ.ಗಳು ವಿವರಗಳು ಈ ಕೆಳಕಂಡಂತಿವೆ:

ಕ್ರ. ಸಂ.	ಬಳಕೆದಾರರ ವಿವರ	ವಸೂಲಿ ಮಾಡಿದ ಹಣ (ಕೋಟಿ ರೂ.ಗಳಲ್ಲಿ)
1.	ಐ.ಪಿ. ಸೆಟ್ಟು ಬಳಕೆದಾರರಿಂದ	450.12
2.	ಕೈಗಾರಿಕೋದ್ಯಮಿಯವರಿಂದ	521.34
3.	ಇತರೆ ವರ್ಗಗಳ ಬಳಕೆದಾರರಿಂದ	848.00
	ಒಟ್ಟು	1,819.47

ನಿಗಮದ ಆರ್ಥಿಕ ಪರಿಸ್ಥಿತಿಯನ್ನು ಸುಧಾರಿಸಲು ನಿಗಮವು ಬಾಕಿ ವಸೂಲಾತಿಯನ್ನು ತೀವ್ರ ರೀತಿಯಲ್ಲಿ ಪರಿಗಣಿಸಿದ್ದು, ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗಿದೆ.

1. ಬಾಕಿವಸೂಲಾತಿಗಾಗಿ ವಿಶೇಷ ಪಡೆಗಳನ್ನು ರಚಿಸಿ ಬಾಕಿ ಉಳಿಸಿಕೊಂಡಿರುವವರ ಸ್ವಾಮ್ಯರಿಗೆ ವಿದ್ಯುತ್ ಸಂಪರ್ಕವನ್ನು ಕಡಿದು ಹಾಕುವ ಕಾರ್ಯಾಚರಣೆಯನ್ನು (mass disconnection drive) ತೀವ್ರವಾಗಿ ನಡೆಸಲಾಗುತ್ತಿದೆ.

2. ಕೆ.ಇ.ಬಿ. ರೆಕವರಿ ಆಫ್ ಡ್ಯೂಸ್ ಆಕ್ಟ್ 1976ರ ಪ್ರಕಾರ ಬಾಕಿ ವಸೂಲಾತಿಗೆ ಕ್ರಮ ತೆಗೆದುಕೊಳ್ಳಲಾಗುತ್ತಿದೆ.

3. ವಿದ್ಯುತ್ ಬಾಕಿ ಬಗ್ಗೆ ಸಲ್ಲಿಸಲ್ಪಡುವ ಮೇಲ್ಮನವಿಗಳನ್ನು ಶೀಘ್ರ ರೀತಿಯಲ್ಲಿ ಇತ್ಯರ್ಥಪಡಿಸಲು ಮೇಲ್ಮನವಿ ಅಧಿಕಾರಿಗಳಿಗೆ (ಅಪಲೇಟ್ ಅಥಾರಿಟಿ) ಸೂಚಿಸಲಾಗಿದೆ. ದೈನಂದಿನ ಸಂಗ್ರಹಣೆಯನ್ನು ಹೆಚ್ಚಿಸುವ ಸಲುವಾಗಿ ಆಡಿಷನಲ್ ರಿಸೋರ್ಸಸ್ ಮೊಬಿಲೈಸೇಷನ್ ಸೆಲ್ಲನ್ನು ಕಾರ್ಪೋರೇಟ್ ಹಂತದಲ್ಲಿ ರಚಿಸಲಾಗಿದೆ.

4. ನೀರಾವರಿ ಪಂಪುಸೆಟ್ಟುಗಳ, ಭಾಗ್ಯಜ್ಯೋತಿ: ಕುಟೀರಜ್ಯೋತಿ ಸ್ಥಾವರಗಳ, ಕೇಂದ್ರ: ರಾಜ್ಯ ಸರ್ಕಾರದ ಸಂಸ್ಥೆಗಳ ಸ್ಥಾಪನೆಗಳ ಅಂದರೆ, ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ, ಲೋಕೋಪಯೋಗಿ ಇಲಾಖೆ, ವಿತ ನೀರಾವರಿ, ಕುಡಿಯುವ ನೀರಿನ

ಸ್ಥಾಪನೆಗಳ, ಬೆಂಗಳೂರು ನಗರಾಭಿವೃದ್ದಿ ಇಲಾಖೆ, ಗೃಹ ಮಂಡಳಿ ಮತ್ತು ಇತರೆ ಮತ್ತು ಸಹಕಾರ ಸಂಸ್ಥೆಗಳ ವಿದ್ಯುತ್ ಬಳಕೆದಾರರ ದಿನಾಂಕ: 30-11-2000 ದೊಳಗೆ ಬಾಕಿಯಿರುವ ಅಸಲನ್ನು ಪೂರ್ಣವಾಗಿ ಪಾವತಿ ಮಾಡಿದರೆ ಬಡ್ಡಿಯನ್ನು ಮನ್ನಾ ಮಾಡಲಾಗುವ ನೂತನ ಯೋಜನೆ, ಒಂದು ಬಾರಿ ಬಡ್ಡಿ ಮನ್ನಾ ಯೋಜನೆ-2000ವನ್ನು ಜಾರಿಗೆ ತರಲಾಯಿತು. ನೀರಾವರಿ ಪಂಪ್‌ಸೆಟ್ಟು ಬಳಕೆದಾರರಿಗೆ ಈ ಯೋಜನೆಯನ್ನು ಜನವರಿ 2001ರ ಅಂತ್ಯದವರೆಗೆ ವಿಸ್ತರಿಸಲಾಯಿತು. ಡಿಸೆಂಬರ್ 2000ರ ಅಂತ್ಯದೊಳಗೆ ಅಸಲನ್ನು ಮತ್ತು ಶೇ. 10 ರಷ್ಟು ಬಡ್ಡಿಯನ್ನು ಪಾವತಿಸಿದ್ದಲ್ಲಿ ಉಳಿದ ಶೇ. 90ರಷ್ಟು ಬಡ್ಡಿಯನ್ನು ಮನ್ನಾ ಮಾಡುವ ಹಾಗೂ ಜನವರಿ 2001ರ ಅಂತ್ಯದೊಳಗೆ ಅಸಲು ಮತ್ತು ಶೇ. 20 ರಷ್ಟು ಬಡ್ಡಿಯನ್ನು ಪಾವತಿ ಮಾಡಿದ್ದಲ್ಲಿ ಉಳಿದ ಶೇ. 80 ರಷ್ಟು ಬಡ್ಡಿಯನ್ನು ಮನ್ನಾ ಮಾಡುವ ರಿಯಾಯಿತಿಯನ್ನು ನೀಡಲಾಗಿತ್ತು.

5. ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯ ಸ್ಥಾವರಗಳಲ್ಲಿ ದಿನಾಂಕ: 31-3-99ರ ಅಂತ್ಯಕ್ಕೆ ಇದ್ದ ಬಾಕಿಯ ಪೈಕಿ ರೂ. 194.02 ಕೋಟಿಗಳನ್ನು ಸೆಕ್ಯೂರಿಟೈಸೇಷನ್ ಮೂಲಕ ಪಡೆದುಕೊಳ್ಳಲಾಗಿದೆ.

6. ಪುರಸಭೆ, ನಗರಸಭೆ: ಪಟ್ಟಣ ಪಂಚಾಯಿತಿ ಮಹಾನಗರ ಪಾಲಿಕೆ ಮತ್ತು ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯ ಸ್ಥಾವರಗಳಿಗೆ ಸಂಬಂಧಿಸಿದಂತೆ ಡಿಮ್ಯಾಂಡ್ ಮೊಬಲಗಿನ ವಸೂಲಾತಿಗೆ ಕ್ರಮ ತೆಗೆದುಕೊಳ್ಳಲಾಗಿದ್ದು, ಇದರಿಂದ ಏಪ್ರಿಲ್ 99 ರಿಂದ ಸೆಪ್ಟೆಂಬರ್ 2000ದ ಅಂತ್ಯದವರೆಗೆ 162.49 ಕೋಟಿ ರೂ.ಗಳು ವಸೂಲಾಗಿದೆ.

ರೈತರಿಗೆ ಅಸಮರ್ಪಕ ವಿದ್ಯುತ್ ಸರಬರಾಜು:

18 (55) **ಶ್ರೀ ಅಂಜನಮೂರ್ತಿ (ನೆಲಮಂಗಲ):** ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

1) ರೈತರಿಗೆ ಸಮರ್ಪಕವಾಗಿ ವಿದ್ಯುತ್ ಸರಬರಾಜು ಆಗದೆ ತೊಂದರೆ ಆಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ;

2) ಹಾಗಿದ್ದಲ್ಲಿ, ಸದರಿ ತೊಂದರೆಯನ್ನು ಹಾಗೂ ನಷ್ಟ ತಪ್ಪಿಸಲು ಸಕಾಲಕ್ಕೆ ಸಮರ್ಪಕ ವಿದ್ಯುತ್ ಸರಬರಾಜು ಮಾಡಲು ಸರ್ಕಾರ ಏನು ಕ್ರಮ ಕೈಗೊಳ್ಳುವುದೇ?

ಶ್ರೀ ವೀರಕುಮಾರ್ ಅ. ಪಾಟೀಲ್ (ಇಂಧನ ರಾಜ್ಯ ಸಚಿವರು)

1) ಹೌದು ಬಂದಿದೆ.

2) ರಾಜ್ಯವು ಅನುಭವಿಸುತ್ತಿರುವ ವಿದ್ಯುತ್ ಕೊರತೆಯನ್ನು ನೀಗುವ ಸಲುವಾಗಿ ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗಿರುತ್ತದೆ.

1. ವಿದ್ಯುತ್ ಉತ್ಪಾದನೆಯನ್ನು ಖಾಸಗೀ ಕ್ಷೇತ್ರಕ್ಕೆ ಮುಕ್ತಗೊಳಿಸಲಾಗಿದ್ದು, ಹಲವಾರು ಖಾಸಗೀ ಕಂಪನಿಗಳು ಖಾಸಗೀ ಕ್ಷೇತ್ರದಲ್ಲಿ ವಿದ್ಯುತ್ ಉತ್ಪಾದನೆಯನ್ನು ಕೈಗೊಳ್ಳಲು ಮುಂದೆ ಬಂದಿದ್ದಾರೆ. ಈಗಾಗಲೇ ಜಿಂದಾಲ್ ಟ್ರಾ ಕ್ಟಬಲ್ ಪವರ್ ಕಂಪನಿ ಮತ್ತು ರಾಯಲ್